## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.1258-2016** **ಪಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಲ್ಲೇಗೌಡ<br>ಗೊದ್ದನಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 17-06-2025.** |

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಿ.ಡಬ್ಲೂ-1 ರವರ ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ ಕೆ.ಎಸ್.ಕೆ ವಕೀಲರಿಂದಃ**

ನಾನು ಅವಿದ್ಯಾವಂತ. ನಿಪಿ-1 ಅನ್ನು ಆರೋಪಿ ಉಮೇಶ್ ರವರು ಬರೆದಿರುತ್ತಾರೆ ಎಂದರೆ ಸರಿ. ಆರೋಪಿ ನನ್ನಿಂದ ಹಣ ಪಡೆದಿರುವ ದಿನಾಂಕ ನನಗೆ ಗೊತ್ತಿಲ್ಲ. ಆರೋಪಿ ನನಗೆ ನಿಪಿ-1 ರ ಚೆಕ್ಕನ್ನು ಯಾವ ದಿನಾಂಕದಂದು ನೀಡಿದರು ಎಂದು ನನಗೆ ನೆನಪಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿವಂತೆ ಆರೋಪಿಗೆ ಸಾಲ ನೀಡಿದಾಗ ನನ್ನ ಹೆಂಡತಿ, ಮಗಳು ಮತ್ತು ನನ್ನ ಅಳಿಯ ಇದ್ದರು ಎಂದು ತಿಳಿಸಿದ್ದು ಅವರನ್ನು ಸಾಕ್ಷಿಯನ್ನಾಗಿ ಮಾಡಲು ಮತ್ತು ನ್ಯಾಯಾಲಯಕ್ಕೆ ಕರೆದುಕೊಂಡು ಬರಲು ನನಗೆ ಯಾವುದೇ ತೊಂದರೆ ಇಲ್ಲ. ಆರೋಪಿ ನಾನು ಸಾಲ ನೀಡಿದ 2 ತಿಂಗಳ ನಂತರ ನನಗೆ ಚೆಕ್ಕನ್ನು ನೀಡಿದ್ದು, ಅದಾದ ಬಳಿಕ 3-4 ದಿನ ಆದ ಬಳಿಕ ಚೆಕ್ ಬೌನ್ಸ್ ಆಗಿರುತ್ತದೆ. ನಾನು

ಆರೋಪಿ ಆಸ್ತಿವಂತರು ಮತ್ತು ಹಣವಂತರು ಎಂಬ ನಂಬಿಕೆಯಿಂದ ಅವರಿಗೆ ಸಾಲವಾಗಿ ಹಣ ನೀಡಿರುತ್ತೇನೆ. ನಾನು ಆರೋಪಿಗೆ ಸಾಲ ನೀಡಿದ ಬಳಿಕ 2-3 ಭಾರಿ ಹಣವನ್ನು ವಾಪಸ್ಸು ನೀಡುವಂತೆ ಕೇಳಿರುತ್ತೇನೆ.

2. ಆರೋಪಿ ಮತ್ತು ನನ್ನ ಹೆಂಡತಿ ರಕ್ತ ಸಂಬಂಧಿಕರು ಎಂದರೆ ಸರಿಯಲ್ಲ. ಉಮೇಶ್ ರವರು ಈ ಮುಂಚೆ ನನ್ನ ಬಳಿ 5000 ದಿಂದ 10,000/- ಗಳನ್ನು ಸಾಲವಾಗಿ ಪಡೆದಿರುತ್ತಾರೆ ಮತ್ತು ಈ ಮುಂಚೆ ಸಹ ಹಣಕಾಸಿನ ವ್ಯವಹಾರ ಸಹ ನಾವಿಬ್ಬರು ಹೊಂದಿರುತ್ತೇವೆ. ಆರೋಪಿಗೆ ಸೇರಿದ ಆಸ್ತಿಯ ವಿವರಗಳನ್ನು ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಆರೋಪಿ ಗಾರೆ ಕೆಲಸ ಮಾಡುತ್ತಿದ್ದು ಮತ್ತ ಆತ ಕುಡಿಯವ ಚಟ ಸಹ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆತನಿಗೆ ಹೆಂಡತಿ ಮತ್ತು ಇರುತ್ತಾರೆ ಎಂದರೆ ಸರಿ. ಆರೋಪಿಗೆ ಕುಡಿಯುವ ಚಟ ಇದ್ದು ಅವನನ್ನು ಆಗಾಗ ಆಸ್ಪತ್ರೆಗೆ ಚಿಕಿತ್ಸೆಗಾಗಿ ಅವರನ್ನು ಕರೆದುಕೊಂಡು ಹೋಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆರೋಪಿಯ ತಾಯಿ ಇಬ್ಬರು ಬಂದು ಈ ಹಣವನ್ನು ಪಡೆದಿರುತ್ತಾರೆ.

3. ಆರೋಪಿಗೆ ಸಾಲವನ್ನು ಚೆಕ್ ಅಥವಾ ಡಿ.ಡಿ ಮುಖಾಂತರ ನೀಡಲು ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ನೇರವಾಗಿ ಮನೆಯಲ್ಲಿಯೇ ಹಣ

ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಲೇವಾದೇವಿ ಮಾಡುವ ಲೈಸೆನ್ಸ್ ಅನ್ನು ಸರ್ಕಾರದಿಂದ ಪಡೆದುಕೊಂಡಿರುವುದಿಲ್ಲ. ನಾನು ಸರ್ಕಾರಕ್ಕೆ ಯಾವುದೇ ತೆರಿಗೆ ಸಹ ಕಟ್ಟುವುದಿಲ್ಲ. ನಿಮ್ಮ ಹೆಂಡತಿ ಭಾಗಾಂಶಕ್ಕಾಗಿ, ತನ್ನ ತಂದೆಯವರ ಮನೆಯವರ ವಿರುದ್ಧ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಈ ವಿಚಾರ ನನಗೆ ಹೆಂಡತಿಯವರಿಗೆ ಗೊತ್ತು ಎಂದು ನುಡಿಯುತ್ತಾರೆ. ನಿಮ್ಮ ಹೆಂಡತಿ, ಅವರು ತಂದೆಯವರ ಮನೆಯವರ ವಿರುದ್ಧ ದಾವೆಯನ್ನು ಹೂಡಿರುತ್ತಾರೆ ಮತ್ತು ನಿಮ್ಮ ಭಾವಮೈದುನರ ರವರು ಜೊತೆ ಆರೋಪಿ ಮತ್ತು ಆತನ ತಾಯಿ ಚೆನ್ನಾಗಿದ್ದಾರೆ ಎಂಬ ದುರುದ್ದೇಶದಿಂದ ನೀವು ಆರೋಪಿ ವಿರುದ್ಧ ಈ ಪ್ರಕರಣವನ್ನು ದಾಖಲು ಮಾಡಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿ ಮತ್ತು ನೀವು ಕೇವಲ ಪರಿಚಯಸ್ಥರಲ್ಲ, ನೀವು ಸಂಬಂಧಿಕರು ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ನಿಮ್ಮ ಅವಶ್ಯಕತೆಗಳಿಗಾಗಿ ಮಾರಾಟ ಮಾಡಿದ್ದು, ಆರೋಪಿಗೆ ಸಾಲ ನೀಡುವ ಸಲುವಾಗಿ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿಗೆ ಯಾವುದೇ ಹಣವನ್ನು ನೀಡಿಲ್ಲ ಮತ್ತು ಅವರು ಯಾವುದೇ ಹಣ ಪಡೆದಿಲ್ಲ, ನೀವು ಸುಳ್ಳು ದೂರನ್ನು ದಾಖಲು ಮಾಡಿದ್ದು, ನಿಮ್ಮ ದೂರು ಖರ್ಚು

ಸಹಿತ ವಜಾಗೊಳ್ಳತಕ್ಕದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ದೂರಿನಲ್ಲಿ ಕೇಳಿರುವ ಪರಿಹಾರಕ್ಕೆ ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**